# ॥ ಶ್ರೀ ವೇಂಕಟೇಶ ಸ್ತವರಾಜ ॥

ಶ್ರೀರಮಣ ಸರ್ವೇಶ ಸರ್ವದ।
ಸಾರಭೋಕ್ತ ಸ್ವತಂತ್ರ ಸರ್ವದ।
ಪಾರಮಹಿಮೋದ್ಧಾರ ಸದ್ಗುಣ ಪೂರ್ಣ ಗಂಭೀರ।
ಸಾರಿದವರಘದೂರಗೈಸಿ
ಸೂರಿಜನರಿಗೆ ಸೌಖ್ಯ ನೀಡುವ।
ಧೀರವೇಂಕಟರಮಣ ಕರುಣದಿ ಪೊರೆಯೋ ನೀ ಎನ್ನ ॥೧॥

ಘನ್ನಮಹಿಮಾಪನ್ನಪಾಲಕ।
ನಿನ್ನಹೊರತಿನ್ನನ್ಯದೇವರ।
ಮನ್ನದಲಿನಾನೆನೆಸೆನೆಂದಿಗು ಬನ್ನ ಬಡಿಸದಿರು।
ಎನ್ನಪಾಲಕ ನೀನೆ ಇರುತಿರೆ
ಇನ್ನು ಭವ ಭಯವೇಕೆ ಎನಗೆ।
ಚೆನ್ನ ವೇಂಕಟರಮಣ ಕರುಣದಿ ಪೊರೆಯೋ ನೀ ಎನ್ನ ॥೨॥

ಲಕುಮಿಬೊಮ್ಮಭವಾಮರೇಶರು
ಭಕುತಿಪೂರ್ವಕ ನಿನ್ನ ಭಜಿಸಿ
ಸಕಲಲೋಕಕೆ ನಾಥರೆನಿಪರೋ ಸರ್ವಕಾಲದಲಿ
ನಿಖಿಳಜೀವರಪೊರೆಯೋ ದೇವನೆ
ಭಕುತಿ ನೀ ಎನಗೀಯದಿರಲು
ವ್ಯಕುತವಾಗ್ಯಪಕೀರ್ತಿ ಬಪ್ಪದೋ ಶ್ರೀನಿಕೇತನನೇ ॥೩॥

ಯಾಕೆ ಪುಟ್ಟದು ಕರುಣ ಎನ್ನೊಳು।
ಸಾಕಲಾರೆಯ ನಿನ್ನ ಶರಣನ ।
ನೂಕಿಬಿಟ್ಟರೆ ನಿನಗೆ ಲೋಕದಿ ಖ್ಯಾತಿ ಬಪ್ಪುವುದೇ।
ನೋಕನೀಯಕ ನೀನೆ ಎನ್ನನು।
ಜೋಕೆಯಿಂದಲಿ ಕಾಯೋ ಬಿಡದೆ।
ಏಕದೇವನು ನೀನೆ ವೆಂಕಟ ಶೇಷಗಿರಿವಾಸ ||೪||

ಅಂಬುಜಾಂಬಕ ನಿನ್ನ ಪದಯುಗ ।
ನಂಬಿಕೊಂಡ ಈ ಪರಿಯಲಿರುತಿರೆ ।
ಡೊಂಬೆಗಾರನ ತೆರದಿ ನೀ ನಿರ್ಭಾಗ್ಯ ಸ್ಥಿತಿ ತೋರೆ।
ಬಿಂಬ ಮೂರುತಿ ನಿನ್ನ ಕರಗತ।
ಕಂಬುವರವೇ ಗತಿಯೋ ವಿಶ್ವಕುಟುಂಬಿ।
ಎನ್ನನು ಸಲಹೋ ಸಂತತ ಶೇಷಗಿರಿವಾಸ ||೫||

ಸಾರಿ ಸಿರಿ ವೈಕುಂಠ ತ್ಯಜಿಸೀ
ಧಾರಿಣೀಯೋಳ್ ಗೊಲ್ಲನಾಗಿ
ಚೋರಕರ್ಮವಾ ಮಾಡಿ ಬದುಕಿಹ ದಾರಿಗರಿಕಿಲ್ಲ
ಸಾರಿಪೇಳುವೆ ನಿನ್ನ ಗುಣಗಳ
ಪಾರವಾಗಿರುತಿಹವ್ರೋ ಜನರಿಗೆ
ಧೀರ ವೇಂಕಟರಮಣ ಪೊರೆಯೋ ನೀ ಎನ್ನ ||೬||

ನೀರ ಮುಳುಗು ಭಾರ ಪೊತ್ತು
ಧಾರುಣೀತಳವಗೆದು ಸಿಟ್ಟಿಲಿ
ಕ್ರೂರನುದರವ ಸೀಳಿ ಕರುಳಿನ ಮಾಲೆ ಧರಿಸಿದರು
ಘೋರವಿಪ್ರ ಕುಠಾರಿ ವನವನ
ಚಾರಿಗೋಪ ದಿಗಾಂಬರಾಶ್ವವ
ಏರಿಪೋದರೂ ಬಿಡೆನೋ ವೇಂಕಟಗಿರಿವಾಸ ॥ ೭ ॥

ಲಕ್ಷ್ಮೀನಾಯಕಸಾರ್ವಭೌಮನೆ
ಪಕ್ಷಿವಾಹನಪರಮಪುರುಷನೆ
ಮೋಕ್ಷದಾಯಕ ಪ್ರಾಣಜನಕ ವಿಶ್ವವ್ಯಾಪಕನೆ
ಅಕ್ಷಯಾಂಬರವಿತ್ತು ವಿಜಯನ
ಪಕ್ಷಪಾತವ ಮಾಡಿ ಕುರುಗಳ
ಲಕ್ಷ್ಯಮಾಡದೆ ಕೊಂದೆಯೋ ಶ್ರೀ ಶೇಷಗಿರಿವಾಸ ॥ ೮ ॥

ಹಿಂದೆ ನೀ ಪ್ರಹ್ಲಾದಗೋಸುಗ ।
ಎಂದು ನೋಡದ ರೂಪ ಧರಿಸಿ ।
ಬಂದು ದೈತ್ಯನ ಒಡಲ ಬಗೆದೆ ।
ಬಾಲಕನು ತಂದೆತಾಯ್ಗಳ ಬಿಟ್ಟು ವಿಪಿನದಿ।
ನಿಂದು ತಪಿಸುವ ಪಂಚಮತ್ಸರ।
ಕಂದನಾಧ್ರುವನಿಗೊಲಿದು ಪೊರೆದೆಯೊ ಶೇಷಗಿರಿವಾಸ ॥ ೯ ॥

ಪಿಂತು ಮಾಡಿದ ಮಹಿಮೆಗಳ ನಾ–
ನೆಂತು ವರ್ಣಿಸಲೇನು ಫಲ ಶ್ರೀ–
ಕಾಂತ ಎನ್ನನು ಪೊರೆಯೆ ಕೀರುತಿ ನಿನಗೆ ಫಲವೇನೊ।
ಕಂತು ಜನಕನೆ ಎನ್ನ ಮನಸಿನ ।
ಅಂತರಂಗದಿ ನೀನೆ ಸರ್ವದ।
ನಿಂತು ಪ್ರೇರಣೆ ಮಾಳ್ಪ ಸರ್ವದ ಶೇಷಗಿರಿವಾಸ ॥ ೧೦ ॥

ಮಡುವಿನೊಳಗಿಹ ಮಕರಿಕಾಲನು
ಪಿಡಿದು ಭಾದಿಸೆ ಕರಿಯು ತ್ರಿಜಗ
ದೊಡೆಯ ಪಾಲಿಸೊ ಎನಲು ತಕ್ಷಣ ಬಂದು ಪಾಲಿಸಿದೆ
ಮಡದಿ ಮಾತನು ಕೇಳಿ ಬಲುಪರಿ
ಬಡವಬ್ರಾಹ್ಮಣ ಧಾನ್ಯ ಕೊಡಲು
ಪೊಡವಿಗಸದಳ ಭಾಗ್ಯ ನೀಡಿದೆ ಶೇಷಗಿರಿವಾಸ ॥ ೧೧ ॥

ಶ್ರೀನಿವಾಸನೆ ಭಕ್ತಪೋಷನೆ ।
ಜ್ಞಾನಿಕುಲಗಳಿಗಭಯದಾಯಕ।
ಧೀನಬಾಂದವ ನೀನೆ ಎನ್ನ ಮನದರ್ಥ ಪೂರೈಸೋ।
ಅನುಪಮೋಪಮಜ್ಞಾನ ಸಂಪದ।
ವಿನಯಪೂರ್ವಕವಿತ್ತು ಪಾಲಿಸೊ।
ಜನುಮಜನುಮಕೆ ಮರೆಯ ಬೇಡವ್ರೋ ಶೇಷಗಿರಿವಾಸ ॥ ೧೨ ॥

ಮದವು ಮತ್ಸರ ಲೋಭ ಮೋಹವು।
ಒದಗಬಾರದು ಎನ್ನ ಮನದಲಿ।
ಪದುಮನಾಭನೆ ಜ್ಞಾನ ಭಕ್ತಿವಿರಕ್ತಿ ನೀನಿತ್ತು।
ಹೃದಯಮಧ್ಯದಿ ನಿನ್ನ ರೂಪವು।
ವದನದಲಿ ತವ ನಾಮಮಂತ್ರವು।
ಸದಯ ಪಾಲಿಸು ಬೇಡಿಕೊಂಬೇನು ಶೇಷಗಿರಿವಾಸ ॥ ೧೩ ॥

ಅಂದನುಡಿ ಪುಸಿಯಾಗಬಾರದು।
ಬಂದ ಭಾಗ್ಯವು ಪೋಗಬಾರದು।
ಕುಂದುಬಾರದೆ ನಿನ್ನ ಕರುಣವು ದಿನದಿ ವರ್ಧಿಸಲಿ।
ನಿಂದೆ ಮಾಡುವ ಜನರ ಸಂಗವು।
ಎಂದಿಗಾದರು ದೊರೆಯಬಾರದು।
ಎಂದು ನಿನ್ನನು ಬೇಡಿಕೊಂಬೆನೊ ಶೇಷಗಿರಿವಾಸ ॥ ೧೪ ॥

ಏನು ಬೇಡಲಿ ಎನ್ನ ದೇವನೇ।
ಸಾನುರಾಗದಿ ಎನ್ನ ಪಾಲಿಸೊ।
ನಾನಾ ವಿಧವಿಧ ಸೌಖ್ಯನಿಡುವುದಿಹಪರಂಗಳಲಿ।
ಶ್ರೀನಿವಾಸನೆ ನಿನ್ನ ದಾಸಗೆ।
ಏನು ಕೊರೆತಿಲೆಲ್ಲಿ ನೋಡಲು।
ನೀನೆ ನಿಂತೀವಿದಧಿ ಪೇಳಿಸು ಶೇಷಗಿರಿವಾಸ ॥೧೫॥

ಆರು ಮನಿದವರೇನು ಮಾಳ್ಪರೊ।
ಆರುವೊಲಿದವರೇನು ಮಾಳ್ಪರೊ।
ಆರುನೇಹಿಗರಾರು ದ್ವೇಷಿಗಳಾರುದಾಶಿನರು।
ಕ್ರೂರ ಜೀವರಹಣಿದು ಸಾತ್ವಿಕ।
ಧೀರ ಜೀವರ ಪೊರೆದು ನಿನ್ನಲಿ।
ಸಾರ ಭಕುತಿಯನಿತ್ತು ಪಾಲಿಸೋ ಶೇಷಗಿರಿವಾಸ ॥೧೬॥

ನಿನ್ನ ಸೇವೆಯನಿತ್ತು ಎನಗೆ।
ನಿನ್ನ ಪದಯುಗಭಕ್ತಿ ನೀಡಿ।
ನಿನ್ನ ಗುಣಗಣಸ್ತವನ ಮಾಡುವ ಜ್ಞಾನ ನೀನಿತ್ತು।
ಎನ್ನ ಮನದಲಿ ನೀನೆ ನಿಂತು।
ಘನ್ನಕಾರ್ಯವ ಮಾಡಿ ಮಾಡಿಸು।
ಧನ್ಯನೆಂದೆನಿಸೆನ್ನ ಲೋಕದಿ ಶೇಷಗಿರಿವಾಸ ॥೧೭॥

ಜಯ ಜಯತು ಶಠ ಕೂರ್ಮರೂಪನೆ।
ಜಯ ಜಯತು ಕಿಟ ಸಿಂಹ ವಾಮನ।
ಜಯ ಜಯತು ಭೃಗುರಾಮ ರಘುಕುಲಸೋಮ ಶ್ರೀರಾಮ।
ಜಯ ಜಯತು ಸಿರಿ ಯದುವರೇಣ್ಯನೆ।
ಜಯ ಜಯತು ಜನಮೋಹ ಬುದ್ಧನೆ।
ಜಯ ಜಯತು ಕಲಿಕಲ್ಮಷಘ್ನನೆ ಕಲ್ಕಿನಾಮಕನೆ ॥೧೮॥

ಕರುಣಸಾಗರ ನೀನೆ ನಿಜಪದ।
ಶರಣವತ್ಸಲ ನೀನೆ ಶಾಶ್ವತ।
ಶರಣ ಜನಮಂದಾರ ಕಮಲಾಕಾಂತ ಜಯವಂತ।
ನಿರುತ ನಿನ್ನನು ನುತಿಸಿ ಪಾಡುವೆ।
ವರದ ಗುರು ಜಗನ್ನಾಥವಿಠ್ಠಲ।
ಪರಮ ಪ್ರೇಮದಿ ಪೊರೆಯೊ ಎನ್ನನು ಶೇಷಗಿರಿವಾಸ ॥೧೯॥
॥ ಶ್ರೀಕೃಷ್ಣಾರ್ಪಣಮಸ್ತು ॥

Collection - naraharisumadhwa